**ಓ ಎಸ್ ನಂಃ 116/2016**
**ಡಿ ಡಬ್ಲ್ಯೂ ಃ 1**

**ದಿಃ 13.06.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ ವಾದಿ ಪರ ಶ್ರೀ ಬಿ ವಿ ಕೆ ವಕೀಲರಿಂದ :-**

ತಹಶೀಲ್ದಾರ್ ರವರು ನಮ್ಮ ಹೆಸರಿಗೆ ದಾವಾ ಸ್ವತ್ತಿನ ಖಾತೆ ಮಾಡಿದ ನಂತರ ನಾವು ಯಾವುದೇ ಅಪೀಲನ್ನು ಯಾವುದೇ ನ್ಯಾಯಾಲಯದಲ್ಲಿ ಸಲ್ಲಿಸಿರುವುದಿಲ್ಲ. ಸದರಿ ವಿಚಾರಕ್ಕೆ ಸಂಬಂಧಪಟ್ಟಂತೆ ತಾವು ನ್ಯಾಯಾಲಯಕ್ಕೆ ಯಾವುದೇ ದಾಖಲಾತಿಯನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತಿಗೆ ಸಂಬಂಧಪಟ್ಟಂತೆ ತಮ್ಮ ತಾಯಿಯ ಹೆಸರಿಗೆ ಮತ್ತು ಗಾಳಪ್ಪನವರ ಹೆಸರಿಗೆ ಖಾತೆ ಆಗಿಲ್ಲ ಎಂದರೆ ಸರಿಯಲ್ಲ. ತಾವು ಎ ಸಿ ನ್ಯಾಯಾಲಯದ ಹಿಂಬರಹದ ಆದಾರದ ಮೇಲೆ ದಾವಾ ಸ್ವತ್ತಿಗೆ ಸಂಬಂಧಪಟ್ಟಂತೆ ಖಾತೆ ಮಾಡಿಸಿಕೊಂಡಿದ್ದಾರೆ ಎಂದರೆ ಸರಿಯಲ್ಲ. ನಿಡಿ 17 ರ ಖಾತೆಯು ಮುತ್ತಯ್ಯನವರ ಕ್ರಯ ಪತ್ರ ಮತ್ತು ಮರಣ ಶಾಸನ ಮೇರೆಗೆ ಆಗಿರುವುದಿಲ್ಲ ಎಂದರೆ ಸರಿಯಲ್ಲ. ತಾವು ನ್ಯಾಯಾಲಯಕ್ಕೆ ಹಾಜರುಪಡಿಸಿರುವ 81 ರಿಂದ 85 ಪಹಣಿ ಪತ್ರಿಕೆಗಳು ದಾವಾ ಸ್ವತ್ತಿಗೆ ಸಂಬಂಧಪಟ್ಟದ್ದಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಸ್ವತಃ ಮುಂದುವರಿದು ಚಲುವಯ್ಯನವರಿಗೆ ಸೇರಿದ ಸ್ವತ್ತು ಎಂದು ನುಡಿಯುತ್ತಾರೆ. ನಿಡಿ 81 ರ ಪಹಣಿ ಪತ್ರಿಕೆಯಲ್ಲಿ ಚಲುವಯ್ಯನವರ ಹೆಸರು ನಮೂದಾಗಿಲ್ಲ ಎಂದರೆ ಸರಿ. ನಿಡಿ 81 ರ ಪಹಣಿ ಪತ್ರಿಕೆ ಸರ್ವೆ ನಂ. 41 ಕ್ಕೆ ಸಂಬಂಧಪಟ್ಟಿದ್ದು ಎಂದರೆ ಸರಿ. ನಿಡಿ 82 ರ ಪಹಣಿ ಪತ್ರಿಕೆ ಸರ್ವೆ ನಂ. 41 ಕ್ಕೆ ಸಂಬಂಧಪಟ್ಟಿದ್ದು ಎಂದರೆ ಸರಿ. ನಿಡಿ 83 ರಿಂದ 85 ರ ಪಹಣಿ ಪತ್ರಿಕೆ ಸರ್ವೆ ನಂ. 51 ಕ್ಕೆ ಸಂಬಂಧಪಟ್ಟಿದ್ದು ಎಂದರೆ ಸರಿ. ಸಾಕ್ಷಿ ಸ್ವತಃ ಮುಂದುವರಿದು ಈ ಎಲ್ಲಾ ಪಹಣಿಗಳು ಚಲುವಯ್ಯನವರ ಹೆಸರಿನಲ್ಲಿವೆ ಎಂದು ನುಡಿಯುತ್ತಾರೆ. ನಿಡಿ 84 ರ ಪಹಣಿ ಪತ್ರಿಕೆ ಕಲಂ ನಂ. 9 ರಲ್ಲಿ ಚಲುವಯ್ಯನವರ ಹೆಸರು ಇಲ್ಲ ಎಂದರೆ ಸರಿ. ಚಲುವಯ್ಯ ಮತ್ತು ಆತನ ಅಣ್ಣ ತಮ್ಮಂದಿರು ಸಾಗೂವಳಿ ಮಾಡುತ್ತಿರುವ ಕಾರಣ ನಿಡಿ 81 ರಿಂದ ನಿಡಿ 85 ರ ಪಹಣಿ ಪತ್ರಿಕೆಗಳನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ಸದರಿ ಪಹಣಿ ಪತ್ರಿಕೆಗಳು ದಾವಾ ಸ್ವತ್ತಿಗೆ ಸಂಬಂಧಪಟ್ಟದ್ದಲ್ಲ ಆದರೆ ಚಲುವಯ್ಯನವರ ಹೆಸರಿನಲ್ಲಿರುವ ಪಹಣಿಗಳು ಎಂದು ನುಡಿಯುತ್ತಾರೆ. ನಿಡಿ 30 ರಿಂದ 33 ರ ಪಹಣಿ ಪತ್ರಿಕೆಗಳಲ್ಲಿ ನರಸಿಂಹಯ್ಯ, ಚಲುವಯ್ಯ ಮತ್ತು ಅಣ್ಣಯ್ಯಪ್ಪ ನವರ ಹೆಸರಿಗೆ ಜಂಟಿ ಖಾತೆ ಇದೆ ಎಂದರೆ ಸರಿ.

2006 ಮತ್ತು 2007 ಸಾಲಿನಲ್ಲಿ ತಾವು ಪ್ರಪ್ರಥಮವಾಗಿ ದಾವಾ ಸ್ವತ್ತಿನ ಖಾತೆಯನ್ನು

ಮಾಡಿಸಿಕೊಂಡಿದ್ದೀರಿ ಅದಕ್ಕಿಂತ ಹಿಂದೆ ದಾವಾ ಸ್ವತ್ತಿನಲ್ಲಿ ತಾವು ಸ್ವಾಧೀನದಲ್ಲಿದ್ದೀರಿ ಎಂದು ತೋರಿಸಲು ನ್ಯಾಯಾಲಯಕ್ಕೆ ದಾಖಲಾತಿಯನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ಮುತ್ತಯ್ಯನವರು ದಾವಾ ಆಸ್ತಿಯನ್ನು ತಮಗೆ ಮರಣ ಶಾಸನ ಮಾಡುವ ಕಾಲಕ್ಕೆ ಮುತ್ತಯ್ಯನವರು ದಾವಾ ಸ್ವತ್ತಿನ ಸ್ವಾಧೀನಾನುಭವದಲ್ಲಿದ್ದರು ಎಂದು ತೋರಿಸಲು ಯಾವುದಾದರೂ ದಾಖಲಾತಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೀರ ಎಂದರೆ ಸಾಕ್ಷಿಯು ಹಾಜರುಪಡಿಸಿದ್ದೇನೆ. ದಾವಾ ಸ್ವತ್ತಿಗೆ ಸಂಬಂಧಪಟ್ಟಂತೆ ಮುತ್ತಯ್ಯನವರು ಕ್ರಯಕ್ಕೆ ಪಡೆದಿರುವ ಕ್ರಯ ಪತ್ರವನ್ನು ತಾವಾಗಲೀ ಮತ್ತು ಗಾಳಪ್ಪನವರು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಎಂದರೆ ಸಾಕ್ಷಿಯು ನಾನು ಅಥವಾ ಗಾಳಪ್ಪನವರು ಸದರಿ ದಾಖಲಾತಿಯನ್ನು ಹಾಜರುಪಡಿಸುತ್ತೇವೆ ಎಂದು ನುಡಿಯುತ್ತಾರೆ.

**ಮುಂದುವರೆದ ಪಾಟೀ ಸವಾಲುಃ ಕಾಲಾವಕಾಶ ಕೋರಿದ್ದಾರೆ ನೀಡಲಾಗಿದೆ.**

**(ಉಖ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಎ ಓ**

**ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು,**

**ಮಾಗಡಿ.**